**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ:- 816/2021**

**ಪ್ರಾಸಾಃ- 2 ಚಾಸಾಃ- 16**

| | | |
|---|---|---|
| ಸಾಕ್ಷಿಯ ಹೆಸರು | : | ರುದ್ರಪ್ಪ |
| ತಂದೆಯ ಹೆಸರು | : | ದೊಡ್ಡ ಮಹಾಲಿಂಗಪ್ಪ |
| ವಯಸ್ಸು | : | 42 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ದಾಸಾಪುರ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.10.2023**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 17 ಗೊತ್ತು . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

ನಾನು ಆರೋಪಿತರನ್ನು ನಮ್ಮ ಊರಿನ ಕ್ರಾಸ್ ನಲ್ಲಿ ಇರುವ ಮಹಾಂಕಾಳಮ್ಮ ದೇವಸ್ಥಾನದ ಹತ್ತಿರ ಕಾರು ಮತ್ತು ಆಟೋದಲ್ಲಿ ಬಂದು ಇದ್ದುದ್ದನ್ನು ನೋಡಿಲ್ಲ ಮತ್ತು ಅಲ್ಲಿ ಇಬ್ಬರು ಹೆಣ್ಣು ಮಕ್ಕಳು ಇದ್ದ ಬಗ್ಗೆ ನೋಡಿಲ್ಲ . ನಾನು ಆ ಕುರಿತಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿ ಇವರನ್ನು ನಮ್ಮ ಊರಿನ ಕ್ರಾಸ್ ಹತ್ತಿರ ಇರುವ ಮೋರಿಯ ಹತ್ತಿರ ಇದ್ದುದ್ದನ್ನು ನೋಡಿ ನಂತರ ಎಲ್ ಎಲ್ ಸಿ ಕೆನಾಲ್ ಪಕ್ಕದ ದಂಡೆಯಲ್ಲಿ ನಿಂತಿದ್ದ ಬಗ್ಗೆ ಮತ್ತು ನಂತರ ಇಬ್ಬರು ಹೆಣ್ಣು ಮಕ್ಕಳು ಕಾಣದಿರುವ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ . ಆರೋಪಿತರು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಹೊಡೆದು ಸಾಯಿಸಿ ಕಾಲುವೆಗೆ ಹಾಕಿದ ಬಗ್ಗೆ ಮತ್ತು ಆರೋಪಿತರನ್ನು ನೋಡಿ ಗುರುತಿಸುವ ಬಗ್ಗೆ ಯಾವುದೇ ಮರು ಹೇಳಿಕೆ ನೀಡಿಲ್ಲ . ಸಾಕ್ಷಿಗೆ ಆತನ ಹೇಳಿಕೆಯ ವಿಡಿಯೋ ಸಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ ಧ್ವನಿ ಮತ್ತು ಚಿತ್ರ ತನ್ನದಲ್ಲ ಎಂದು ನಾನು ಯಾವುದೇ

ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ . ಸದರಿ ಸಿಡಿಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿರುತ್ತದೆ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿನಾಂಕಃ 15-6-2021 ರಂದು ಹಾಗೂ 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸುಮಾರು 3 ವರ್ಷಗಳ ಹಿಂದೆ ರಾತ್ರಿ 8-30 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ 17 ನಮ್ಮ ಹೊಲಕ್ಕೆ ನೀರು ಕಟ್ಟಲು ನಮ್ಮ ಊರಿನ ಕ್ರಾಸ್ ನಲ್ಲಿರುವ ಮಹಾಂಕಾಳಮ್ಮ ದೇವಸ್ಥಾನದ ಹತ್ತಿರ ಹೋಗುತ್ತಿದ್ದಾಗ ಒಂದು ಬಿಳಿ ಕಾರು ನಿಂತಿತ್ತು ಎಂದರೆ ಸರಿಯಲ್ಲ . ಅಲ್ಲಿರುವ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಊಟ ಮಾಡುತ್ತಾ ಒಬ್ಬ ಹೆಣ್ಣ ಮಗಳು ಜೋರಾಗಿ ಮಾತನಾಡುತ್ತಿದ್ದಳು ಎಂದರೆ ಸರಿಯಲ್ಲ . ಅಲ್ಲೇ ಸಮೀಪದ ಕೆನಾಲ್ ಹತ್ತಿರ ಒಂದು ಆಟೋ ಸಹ ನಿಂತಿತ್ತು ಅದರಲ್ಲಿ ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿಯಲ್ಲ .

ನಂತರ ನಾನು ಮತ್ತು ಚಾಸಾ 17 ರಾತ್ರಿ 9-45 ರ ಸುಮಾರಿಗೆ ವಾಪಾಸ್ಸು ಬರುತ್ತಿದ್ದಾಗ ಕಾರು ಮತ್ತು ಆಟೋ ಕೆನಾಲ್ ಪಕ್ಕದಲ್ಲಿ ಲೈಟ್ ಹಾಕಿಕೊಂಡು ನಿಂತಿದ್ದವು ಎಂದರೆ ಸರಿಯಲ್ಲ . ಕಾರಿನಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಆಟೋ ದಲ್ಲಿ ಇಬ್ಬರು ಗಂಡು ಮಕ್ಕಳು ಕುಳಿತಿದ್ದರು ಇಬ್ಬರು ಹೆಣ್ಣು ಮಕ್ಕಳು ಕಾಣಲಿಲ್ಲ ಎಂದರೆ ಸರಿಯಲ್ಲ . ಪೊಲಿಸೀರು ನಮ್ಮನ್ನು ಕರೆದು ವಿಚಾರಿಸಲು ನಾವು ಆರೋಪಿತರನ್ನು ಆ ದಿನ ನೋಡಿ ಗುರುತಿಸಿ ನಮ್ಮ ಊರಿನ ಹತ್ತಿರ ವ್ಯಕ್ತಿಗಳು ಎಂದು ಪೊಲೀಸರಿಗೆ ಹೇಳಿದ್ದೆವು ಎಂದರೆ ಸರಿಯಲ್ಲ . ಆರೋಪಿತರು ಹಣಕಾಸಿನ ವಿಚಾರಕ್ಕೆ ದಿಃ 20-3-2021 ರಂದು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಯನ್ನು ಕಾರಿನಲ್ಲಿ ಅಪಹರಿಸಿಕೊಂಡು ಬಂದು ಎಲ್ಲರೂ ಸೇರಿ 21-3-2021 ರ ರಾತ್ರಿ 9-30 ರ ಸುಮಾರಿಗೆ ಸಿರಿಗೇರಿ ಹತ್ತಿರ ದಾಸಾಪುರ ಕ್ರಾಸ್ ನ ಎಲ್ ಎಲ್ ಸಿ ಕೆನಾಲ್ ಬಳಿ ರಾಮಲಕ್ಷ್ಮಿ ಮತ್ತು ಜಯಮ್ಮ ರವರನ್ನು ಕಬ್ಬಿಣದ ರಾಡಿನಿಂದ ಹೊಡೆದು ಬಂಗಾರದ ಆಭರಣ ತೆಗೆದುಕೊಂಡು ಕಾಲುವೆಯ ನೀರಿಗೆ ಹಾಕಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದ ನಿಪಿ-21 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ ಹಾಗೂ ಆ ಬಗ್ಗೆ ದಿಃ 10-8-2021 ರಂದು ಈಗ

ಓದಿ ಹೇಳಿದ ನಿಪಿ-22 ರಂತೆ ಮರು ಹೇಳಿಕೆ ನೀಡಿ ನಿಪಿ-14 ರಂತೆ ನನ್ನ ಹೇಳಿಕೆಯನ್ನು ವಿಡಿಯೋ ಮಾಡಲಾಗಿತ್ತು ಎಂದರೆ ಸರಿಯಲ್ಲ .

ನಮಗೆ ಆರೋಪಿತರು ಮೃತ ರಾಮಲಕ್ಷ್ಮಿ ಮತ್ತು ಜಯಮ್ಮ ಇವರನ್ನು ನಮ್ಮ ಊರಿನ ಹತ್ತಿರ ಕಾಲುವೆ ಬಳಿ ಕರೆದು ಕೊಂಡು ಬಂದ ವಿಷಯ ನಂತರ ಆ ಇಬ್ಬರು ಹೆಣ್ಣು ಮಕ್ಕಳು ಅಲ್ಲಿ ಕಾಣಲಾರದ ವಿಷಯ ಗೊತ್ತಾಗಿ ಈಗ ಓದಿ ಹೇಳಿದ ನಿಪಿ-21 ಮತ್ತು 22 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ಅನುಕೂಲವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ:- 816/2021**

**ಫ್ರಾಸಾಃ- 3 ಚಾಸಾಃ- 17**

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತಪ್ಪ |
| ತಂದೆ ಹೆಸರು | : | ವೀರೇಶಪ್ಪ |
| ವಯಸ್ಸು | : | 46 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ದಾಸಾಪುರ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- **18.10.2023**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 16 ಗೊತ್ತು . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

ನಾನು ಆರೋಪಿತರನ್ನು ನಮ್ಮ ಊರಿನ ಕ್ರಾಸ್ ನಲ್ಲಿ ಇರುವ ಮಹಾಂಕಾಳಮ್ಮ ದೇವಸ್ಥಾನದ ಹತ್ತಿರ ಕಾರು ಮತ್ತು ಆಟೋದಲ್ಲಿ ಬಂದು ಇದ್ದುದ್ದನ್ನು ನೋಡಿಲ್ಲ ಮತ್ತು ಅಲ್ಲೇ ಇದ್ದ ಇಬ್ಬರು ಹೆಣ್ಣು ಮಕ್ಕಳು ಇದ್ದ ಬಗ್ಗೆ ನೋಡಿಲ್ಲ . ನಾನು ಆ ಕುರಿತಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿ ಇವರನ್ನು ನಮ್ಮ ಊರಿನ ಕ್ರಾಸ್ ಹತ್ತಿರ ಇರುವ ಮೋರಿಯ ಹತ್ತಿರ ಇದ್ದುದ್ದನ್ನು ನೋಡಿ ನಂತರ ಎಲ್ ಎಲ್ ಸಿ ಕೆನಾಲ್ ಪಕ್ಕದ ದಂಡೆಯಲ್ಲಿ ನಿಂತಿದ್ದ ಬಗ್ಗೆ ಮತ್ತು ನಂತರ ಇಬ್ಬರು ಹೆಣ್ಣು ಮಕ್ಕಳು ಕಾಣದಿರುವ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ . ಆರೋಪಿತರು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಹೊಡೆದು ಸಾಯಿಸಿ ಕಾಲುವೆಗೆ ಹಾಕಿದ ಬಗ್ಗೆ ಮತ್ತು ಆರೋಪಿತರನ್ನು ನೋಡಿ ಗುರುತಿಸುವ ಬಗ್ಗೆ ಯಾವುದೇ ಮರು ಹೇಳಿಕೆ ನೀಡಿಲ್ಲ . ಸಾಕ್ಷಿಗೆ ಆತನ ಹೇಳಿಕೆಯ ವಿಡಿಯೋ ಸಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ ಧ್ವನಿ ಮತ್ತು ಚಿತ್ರ ತನ್ನದಲ್ಲ ಎಂದು ನಾನು

ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ . ಸದರಿ ಸಿಡಿಯನ್ನು ಈಗ ನಿಪಿ-23 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿನಾಂಕಃ 15-6-2021 ರಂದು ಹಾಗೂ 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸುಮಾರು 3 ವರ್ಷಗಳ ಹಿಂದೆ ರಾತ್ರಿ 8-30 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ 16 ನಮ್ಮ ಹೊಲಕ್ಕೆ ನೀರು ಕಟ್ಟಲು ನಮ್ಮ ಊರಿನ ಕ್ರಾಸ್ ನಲ್ಲಿರುವ ಮಹಾಂಕಾಳಮ್ಮ ದೇವಸ್ಥಾನದ ಹತ್ತಿರ ಹೋಗುತ್ತಿದ್ದಾಗ ಒಂದು ಬಿಳಿ ಕಾರು ನಿಂತಿತ್ತು ಎಂದರೆ ಸರಿಯಲ್ಲ . ಅಲ್ಲಿರುವ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಊಟ ಮಾಡುತ್ತಾ ಒಬ್ಬ ಹೆಣ್ಣು ಮಗಳು ಜೋರಾಗಿ ಮಾತನಾಡುತ್ತಿದ್ದಳು ಎಂದರೆ ಸರಿಯಲ್ಲ . ಅಲ್ಲೇ ಸಮೀಪದ ಕೆನಾಲ್ ಹತ್ತಿರ ಒಂದು ಆಟೋ ಸಹ ನಿಂತಿತ್ತು ಅದರಲ್ಲಿ ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿಯಲ್ಲ .

ನಂತರ ನಾನು ಮತ್ತು ಚಾಸಾ 16 ರಾತ್ರಿ 9-45 ರ ಸುಮಾರಿಗೆ ವಾಪಾಸ್ಸು ಬರುತ್ತಿದ್ದಾಗ ಕಾರು ಮತ್ತು ಆಟೋ ಕೆನಾಲ್ ಪಕ್ಕದಲ್ಲಿ ಲೈಟ್ ಹಾಕಿಕೊಂಡು ನಿಂತಿದ್ದವು ಎಂದರೆ ಸರಿಯಲ್ಲ . ಕಾರಿನಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಆಟೋ ದಲ್ಲಿ ಇಬ್ಬರು ಗಂಡು ಮಕ್ಕಳು ಕುಳಿತಿದ್ದರು ಇಬ್ಬರು ಹೆಣ್ಣು ಮಕ್ಕಳು ಕಾಣಲಿಲ್ಲ ಎಂದರೆ ಸರಿಯಲ್ಲ . ಪೊಲಿಸರು ನಮ್ಮನ್ನು ಕರೆದು ವಿಚಾರಿಸಲು ನಾವು ಆರೋಪಿತರನ್ನು ಆ ದಿನ ನೋಡಿ ಗುರುತಿಸಿ ನಮ್ಮ ಊರಿನ ಹತ್ತಿರ ವ್ಯಕ್ತಿಗಳು ಎಂದು ಪೊಲೀಸರಿಗೆ ಹೇಳಿದ್ದೆವು ಎಂದರೆ ಸರಿಯಲ್ಲ . ಆರೋಪಿತರು ಹಣಕಾಸಿನ ವಿಚಾರಕ್ಕೆ ದಿಃ 20-3-2021 ರಂದು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಯನ್ನು ಕಾರಿನಲ್ಲಿ ಅಪಹರಿಸಿಕೊಂಡು ಬಂದು ಎಲ್ಲರೂ ಸೇರಿ 21-3-2021 ರ ರಾತ್ರಿ 9-30 ರ ಸುಮಾರಿಗೆ ಸಿರಿಗೇರಿ ಹತ್ತಿರ ದಾಸಾಪುರ ಕ್ರಾಸ್ ನ ಎಲ್ ಎಲ್ ಸಿ ಕೆನಾಲ್ ಬಳಿ ರಾಮಲಕ್ಷ್ಮಿ ಮತ್ತು ಜಯಮ್ಮ ರವರನ್ನು ಕಬ್ಬಿಣದ ರಾಡಿನಿಂದ ಹೊಡೆದು ಬಂಗಾರದ ಆಭರಣ ತೆಗೆದುಕೊಂಡು ಕಾಲುವೆಯ ನೀರಿಗೆ ಹಾಕಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದ ನಿಪಿ-24 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ ಹಾಗೂ ಆ ಬಗ್ಗೆ ದಿಃ 10-8-2021

ರಂದು ಈಗ ಓದಿ ಹೇಳಿದ ನಿಪಿ-25 ರಂತೆ ಮರು ಹೇಳಿಕೆ ನೀಡಿ ಆ ಸಮಯದಲ್ಲಿ ಈಗ ತೋರಿಸಿದ ನಿಪಿ-23 ರಂತೆ ನನ್ನ ಹೇಳಿಕೆಯನ್ನು ವಿಡಿಯೋ ಮಾಡಲಾಗಿತ್ತು ಎಂದರೆ ಸರಿಯಲ್ಲ .

-3-

ನಮಗೆ ಆರೋಪಿತರು ಮೃತ ರಾಮಲಕ್ಷ್ಮಿ ಮತ್ತು ಜಯಮ್ಮ ಇವರನ್ನು ನಮ್ಮ ಊರಿನ ಹತ್ತಿರ ಕಾಲುವೆ ಬಳಿ ಕರೆದುಕೊಂಡು ಬಂದ ವಿಷಯ ನಂತರ ಆ ಇಬ್ಬರು ಹೆಣ್ಣು ಮಕ್ಕಳು ಅಲ್ಲಿ ಕಾಣಲಾರದ ವಿಷಯ ಗೊತ್ತಾಗಿ ಈಗ ಓದಿ ಹೇಳಿದ ನಿಪಿ-24 ಮತ್ತು 25 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ಅನುಕೂಲವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>

<u>ವಿಶೇಷ ಮೊಕದ್ದಮೆ ಸಂಖ್ಯೆ:- 816/2021</u>

ಪ್ರಾಸಾಃ- 4 ಚಾಸಾಃ- 18

| | | |
|---|---|---|
| ಸಾಕ್ಷಿಯ ಹೆಸರು | : | ಇಸ್ಮಾಯಿಲ್ |
| ತಂದೆ ಹೆಸರು | : | ಅಬ್ದುಲ್ ಕಲಾಂ ಸಾಬ್ |
| ವಯಸ್ಸು | : | 50 ವರ್ಷ |
| ವೃತ್ತಿ | : | ಕೂಲ್ ಡ್ರಿಂಕ್ಸ್ ಶಾಪ್ |
| ವಾಸಸ್ಥಳ | : | ಹೊಳಗುಂದ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.10.2023

<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>

ನನಗೆ ಆರೋಪಿತರು ಗೊತ್ತಿಲ್ಲ . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

ನನ್ನದೊಂದು ಹೊಳಗುಂದದಲ್ಲಿ ಸಿನಿಮಾ ಟಾಕೀಸ್ ಹತ್ತಿರ ಕೂಲ್ ಡ್ರಿಂಕ್ಸ್ ಅಂಗಡಿ ಇರುತ್ತದೆ . 1 ನೇ ಆರೋಪಿ ಕಾರಿನಲ್ಲಿ ಬಂದು ನನ್ನ ಅಂಗಡಿಯಿಂದ ಕೂಲ್ ಡ್ರಿಂಕ್‌ಸ್ ಖರೀದಿಸಿಲ್ಲ ಮತ್ತು ಆತನ ಜೊತೆ ಯಾರೂ ಇದ್ದಿಲ್ಲ . ನನಗೆ ಆರೋಪಿತರು ಮೃತ ರಾಮಲಕ್ಷ್ಮಿ ಮತ್ತು ಜಯಮ್ಮರನ್ನು ಹಣದ ವಿಚಾರಕ್ಕೆ ಅಪಹರಿಸಿ ಕೊಲೆ ಮಾಡಿರುತ್ತಾರೆ ಗೊತ್ತಾಯಿತು ಎಂದು ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ . ಸಾಕ್ಷಿಗೆ ಆತನ ಹೇಳಿಕೆಯ ವಿಡಿಯೋ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ ಚಿತ್ರ ಮತ್ತು ಧ್ವನಿ ತನ್ನದಲ್ಲ ಎಂದು ನುಡಿಯುತ್ತಾರೆ . ಸದರಿ ಸಿಡಿಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿರುತ್ತದೆ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).



ಪಾಟೀ ಸವಾಲುಃ ಅಭಿಯೋಜಕರವರಿಂದಃ

ದಿನಾಂಕಃ 15-6-2021 ರಂದು ಹಾಗೂ 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ .

ದಿನಾಂಕಃ 15-6-2021 ರಂದು ನಾನು ನಮ್ಮ ಅಂಗಡಿಯಲ್ಲಿದ್ದಾಗ ಪೊಲೀಸರು 1 ನೇ ಅರೋಪಿಯನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ .

ದಿಃ 21-3-2021 ರಂದು ಬೆಳಿಗ್ಗೆ 1 ನೇ ಆರೋಪಿ ನನ್ನ ಅಂಗಡಿಯಲ್ಲಿ ಕೂಲ್ ಡ್ರಿಂಕ್ಸ್ ಮತ್ತು ವಾಟರ್ ಬಾಟಲ್ ಖರೀದಿಸಿದ್ದ ಎಂದರೆ ಸರಿಯಲ್ಲ ಮತ್ತು ಆತ ತಂದಿದ್ದ ಕಾರಿನಲ್ಲಿ ಇಬ್ಬರು ಹೆಣ್ಣು ಮಕ್ಕಳು ಇದ್ದು ನಂತರ ಅವರು ಗುಟ್ಟು ಮಲ್ಲಯ್ಯ ದೇವಸ್ಥಾನದ ಕಡೆಗೆ ಹೋದ ಬಗ್ಗೆ ನೋಡಿದ್ದೆ ಎಂದರೆ ಸರಿಯಲ್ಲ . ನಂತರ ನನಗೆ ವಿಷಯ ಗೊತ್ತಾಗಿದ್ದೇನೆಂದರೆ ಆರೋಪಿತರೆಲ್ಲರೂ ಮೃತ ಜಯಮ್ಮ ಹಾಗೂ ರಾಮಲಕ್ಷ್ಮಿ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕಾರಿನಲ್ಲಿ ಅಪಹರಿಸಿ ಹೊಸಪೇಟೆಗೆ ಹೋಗಿ ನಂತರ ದಿಃ 21-3-2021 ರಂದು ರಾತ್ರಿ 9-30 ಗಂಟೆ ಸುಮಾರಿಗೆ ದಾಸಾಪುರ ಗ್ರಾಮದ ಎಲ್ ಎಲ್ ಸಿ ಕೆನಾಲ್ ಬಳಿ ಕೊಲೆ ಮಾಡಿ ನೀರಿನಲ್ಲಿ ಹಾಕಿ ಬಂಗಾರ ತೆಗೆದುಕೊಂಡ ಬಗ್ಗೆ ಈಗ ಓದಿ ಹೇಳಿದ ನಿಪಿ- 26 ರಂತೆ ಹೇಳಿಕೆ ಮತ್ತು ನಿಪಿ- 27 ರಂತೆ ಮರು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ . ಆ ಸಮಯದಲ್ಲಿ ನಿಪಿ-23 ರಂತೆ ನನ್ನ ಹೇಳಿಕೆಯನ್ನು ವಿಡಿಯೋ ಮಾಡಲಾಗಿತ್ತು ಎಂದರೆ ಸರಿಯಲ್ಲ .

ನನಗೆ ನಿಪಿ-26 ಮತ್ತು ನಿಪಿ-27 ಮತ್ತು 23 ರ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆ:- 816/2021

ಫ್ರಾಸಾಃ- 5 ಚಾಸಾಃ- 20

| | | |
|---|---|---|
| ಸಾಕ್ಷಿಯ ಹೆಸರು | : | ಹುಲುಗಪ್ಪ |
| ತಂದೆ ಹೆಸರು | : | ಪರಸಪ್ಪ |
| ವಯಸ್ಸು | : | 33 ವರ್ಷ |
| ವೃತ್ತಿ | : | ಗ್ರಾಮ ಪಂಚಾಯಿತಿಯಲ್ಲಿ ಕೆಲಸ |
| ವಾಸಸ್ಥಳ | : | ಹೊಳಗುಂದ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.10.2023

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನಾನು ಆಂಧ್ರ ಪ್ರದೇಶದ ಹೊಳಗುಂದ ಗ್ರಾಮ ಪಂಚಾಯಿತಿಯಲ್ಲಿ ಕೂಲಿಯಾಗಿ ಕೆಲಸ ನಿರ್ವಹಿಸುತಿತದ್ದೇನೆ . ನನಗೆ ಆರೋಪಿತರು ಗೊತ್ತಿಲ್ಲ . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

ನನ್ನದೊಂದು ಮೊಬೈಲ್ ಇದ್ದು ನಾನು ನನ್ನ ಮೊಬೈಲ್ ನಿಂದ ಹೊಳಗುಂದದ ಬ್ರಿಡ್ಜ್ ಹತ್ತಿರ ಕಾಲುವೆಯಲ್ಲಿ ಯಾವುದೇ ಶವದ ಪೋಟೋ ತೆಗೆದಿಲ್ಲ ಮತ್ತು ಬಳ್ಳಾರಿ ಪೊಲೀಸರಿಗೆ ಸದರಿ ನನ್ನ ಮೊಬೈಲ್‌ನಲ್ಲಿ ಇದ್ದ ಪೋಟೋಗಳನ್ನು ತೋರಿಸಿ ಅವುಗಳನ್ನು ಪ್ರಿಂಟ್ ತೆಗೆಸಿ ಕೊಟ್ಟಿಲ್ಲ. ಆ ಕುರಿತಂತೆ ನಾನು ಪೊಲೀಸರ ಮುಂದೆ ಯಾವುದದೇ ಹೇಳಿಕೆ ನೀಡಿಲ್ಲ . ಪೊಲಿಸೀರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ . ಸಾಕ್ಷಿಗೆ ಹೊಳಗುಂದ ಗ್ರಾಮ ಪಂಚಾಯಿತಿಯಲ್ಲಿ ಮಾಡಿದ ಪಂಚನಾಮೆ ನಿಪಿ-12 ನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು . ನಿಪಿ-12 ರ ಮಾಹಿತಿ ಇಲ್ಲ. ಸಾಕ್ಷಿಗೆ ನಿಪಿ-13 ರ ಪೋಟೋಗಳ ಸಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ . ಸಾಕ್ಷಿಗೆ ತನ್ನ ಹೇಳಿಕೆಯ ವಿಡಿಯೋ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ ಚಿತ್ರ ಮತ್ತು ಧ್ವನಿ

ತನ್ನದಲ್ಲ ಎಂದು ನುಡಿಯುತ್ತಾರೆ. ಸದರಿ ಸಿಡಿಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿರುತ್ತದೆ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿನಾಂಕಃ 2-7-2021 ರಂದು ಮತ್ತು 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ .

ಬಳ್ಳಾರಿ ಪೋಲಿಸೀರು ನಮ್ಮ ಪಂಚಾಯಿತಿಗೆ ಬಂದು ಎರಡು ಹೆಣ್ಣು ಮಕ್ಕಳ ಶವದ ಬಗ್ಗೆ ವಿಚಾರಿಸಿದ್ದರು ಎಂದರೆ ಸರಿಯಲ್ಲ . ನಾನು ಸದರಿ ಇಬ್ಬರು ಹೆಣ್ಣು ಮಕ್ಕಳ ಶವಗಳು ಕಾಲುವೆ ನೀರಿನಲ್ಲಿ ತೇಲುತ್ತಾ ಹೋಗುತ್ತಿರುವುದನ್ನು ಮೊಬೈಲ್ ನಲ್ಲಿ ಪೋಟೋ ತೆಗೆದಿಟ್ಟು ಕೊಂಡಿದ್ದೆ ಎಂದರೆ ಸರಿಯಲ್ಲ ಮತ್ತು ಪೊಲೀಸರೊಂದಿಗೆ ಚಾಸಾ 1 ರವರು ಬಂದಿದ್ದು ಅವರಿಗೆ ಮೊಬೈಲ್ ನಲ್ಲಿಯ ಪೋಟೋ ತೋರಿಸಲಾಗಿ ಅವು ತನ್ನ ತಾಯಿ ಜಯಮ್ಮ ಮತ್ತು ತಂಗಿ ರಾಮಲಕ್ಷ್ಮಿ ರವರ ಪೋಟೋಗಳು ಎಂದು ಗುರುತಿಸಿದ್ದು ಆರೋಪಿತರು ಹಣಕಾಸಿನ ವಿಚಾರವಾಗಿ ಅವರಿಬ್ಬರನ್ನು ಹೊಡೆದು ಕೊಲೆ ಮಾಡಿ ಕಾಲುವೆಯಲ್ಲಿ ಹಾಕಿದ್ದರು ಎಂದು ನಮಗೆ ತಿಳಿದು ಬಂದಿತ್ತು ಎಂದರೆ ಸರಿಯಲ್ಲ ಮತ್ತು ನನ್ನ ಮೊಬೈಲ್ ನಲ್ಲಿ ಇದ್ದ ಪೋಟೋಗಳನ್ನು ಸಿಡಿಗೆ ವರ್ಗಾಯಿಸಿ ನಿಪಿ-13 ರಂತೆ ಸಿಡಿಯಲ್ಲಿ ಸಂಗ್ರಹಿಸಿ ಈಗ ಓದಿ ಹೇಳಿದ ನಿಪಿ-12 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ . ಈಗ ಓದಿ ಹೇಳಿದ ನಿಪಿ- 28 ಮತ್ತು 29 ರಂತೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ .

ನನಗೆ  ನಿಪಿ-28 ಮತ್ತು ನಿಪಿ-29 ಹೇಳಿಕೆ ನೀಡಿದ್ದರೂ  ಮತ್ತು ನಿಪಿ- 23 ರಂತೆ ವಿಡಿಯೋ ಮಾಡಿದ್ದರೂ ಸಹ  ಹಾಗೂ ನಿಪಿ-12 ರಂತೆ ಶವದ ಪೋಟೋಗಳನ್ನು ಸಿಡಿಗೆ ನಿಪಿ-13 ರಂತೆ ವರ್ಗಾಯಿಸಿದ ಬಗ್ಗೆ ಮಾಹಿತಿ ಇದ್ದರೂ  ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿ  ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು  ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816/2021**

ಫ್ರಾಸಾಃ- 6 ಚಾಸಾಃ- 21

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕಟೇಶ್ |
| ತಂದೆ ಹೆಸರು | : | ನಾರಾಯಣ |
| ವಯಸ್ಸು | : | 28 ವರ್ಷ |
| ವೃತ್ತಿ | : | ಮೇಸ್ತ್ರಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.10.2023

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1 ಗೊತ್ತಿಲ್ಲ . ನನಗೆ ಆರೋಪಿತರು ಗೊತ್ತಿಲ್ಲ . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

1 ನೇ ಆರೋಪಿ ಜಯಮ್ಮ ಮತುತ ರಾಮಲಕ್ಷ್ಮಿಯವರನ್ನು ಕಾರಿನಲ್ಲಿ ಕರೆದುಕೊಂಡು ಹೋಗಿದ್ದನ್ನು ಯಾವತ್ತೂ ನೋಡಿರುವುದಿಲ್ಲ ಮತ್ತು ಆ ಕುರಿತು ಚಾಸಾ 1 ರವರಿಗೆ ಯಾವುದೇ ವಿಷಯ ತಿಳಿಸಿಲ್ಲ . ಜಯಮ್ಮ ಮತ್ತು ರಾಮಲಕ್ಷ್ಮಿ ಕಾಣೆಯಾದ ವಿಚಾರ ಚಾಸಾ 1 ನಮಗೆ ಹೇಳಿಲ್ಲ ಮತ್ತು ಆ ಕುರಿತಂತೆ ನಾನು ಪೊಒಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ .

ಆರೋಪಿತರು ಜಯಮ್ಮ ಮತುತ ರಾಮಲಕ್ಷ್ಮಿರವರನ್ನು ಹಣಕಾಸಿನ ವಿಚಾರಕ್ಕಾಗಿ ಜಗಳ ಮಾಡಿಕೊಂಡು ಇದ್ದ ದೆವೇಷದಿಂದ ಅಪಹರಿಸಿ ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ ಮತ್ತು ಆ ಕುರಿತಂತೆ ನಾನು ಯಾವುದೇ ಹೇಳಿಕೆಗಳನ್ನು ನೀಡಿಲ್ಲ . ಪೊಲಿಸೇರು ನನ್ನನ್ನು ಮೃತ

ಜಯಮ್ಮ ಮತ್ತು ರಾಮಲಕ್ಷ್ಮಿ ರವರು ಅಪಹರಣವಾದ ಸ್ಥಳದ ಹತ್ತಿರ ಯಾವುದೇ ಪಂಚನಾಮೆಗೆ ಕರೆದಿಲ್ಲ . ಸಾಕ್ಷಿಗೆ ಬಳ್ಳಾರಿಯ ಬೆಳಗಲ್ ರಸ್ತೆಯ ಮಸೀದಿ ಮುಂದೆ ಮೃತಳನ್ನು 1 ನೇ



ಆರೋಪಿ ಕಾರಿನಲ್ಲಿ ಅಪಹರಿಸಿದ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು . ನಿಪಿ-5 ರ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ-5 ರ ಕಾಲಕ್ಕೆ ತಯಾರಿಸಿದ ನಕಾಶೆ ತೋರಿಸಲಾಗಿ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ನಕಾಶೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು . ನಿಪಿ-6 ನ್ನು ಯಾವ ಕಾರಣಕ್ಕೆ ಮಾಡಿರುತ್ತಾರೆ ಗೊತ್ತಿಲ್ಲ . ಸಾಕ್ಷಿಗೆ ನಿಪಿ-5 ಪಂಚನಾಮೆ ಕಾಲಕ್ಕೆ ತೆಗೆದ ಫೋಟೋ ತೋರಿಸಲಾಗಿ ಅದರಲ್ಲಿ ತನ್ನ ಬಿಂಬ ಇದ್ದ ಬಗ್ಗೆ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿರುತ್ತದೆ . ನಿಪಿ-7 ನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ . ಪೊಲೀಸರು ನನ್ನ ಹೇಳಿಕೆಯ ಯಾವುದೇ ವಿಡಿಯೋ ಮಾಡಿಲ್ಲ . ಸಾಕ್ಷಿಗೆ ಆತನ ಹೇಳಿಕೆಯ ವಿಡಿಯೋ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ ಚಿತ್ರ ಮತ್ತು ಧ್ವನಿ ತನ್ನದಲ್ಲ ಎಂದು ನುಡಿಯುತ್ತಾರೆ . ಸದರಿ ಸಿಡಿಯನ್ನು ನಿಪಿ-30 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

ಪಾಟೀ ಸವಾಲುಃ ಅಭಿಯೋಜಕರವರಿಂದಃ

ದಿನಾಂಕಃ 7-6-2021 ರಂದು , 15-6-2021 ಹಾಗೂ 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ನಾನು ಮತ್ತು ಚಾಸಾ 22 ಕೆಲಸದ ನಿಮಿತ್ತ ಬಳ್ಳಾರಿಯ ಬಂಡಿಹಟ್ಟಿ ಹತ್ತಿರ ಹೋಗಿದ್ದಾಗ ಜಯಮ್ಮ ರವರ ಮಗಳು ಶ್ರಾವಣಿ ನಮ್ಮನ್ನು ಮಾತನಾಡಿಸಿದ್ದಳು ಎಂದರೆ ಸರಿಯಲ್ಲ . ಆ ಸಮಯದಲ್ಲಿ ಚಾಸಾ 1 ತನ್ನ ತಾಯಿ ಜಯಮ್ಮ ಹಾಗೂ ತಂಗಿ ರಾಮಲಕ್ಷ್ಮಿ ರವರು ಸುಮಾರು ದಿನಗಳಿಂದ ಎಲ್ಲಿಗೋ ಹೋಗಿದ್ದಾರೆ

ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ . ಆಗ ನಾನು ಮಾರ್ಚ್ 2021 ರ 3 ನೇ ಶನಿವಾರ ಮದ್ಯಾಹ್ನ 2-30 ರ ಸುಮಾರಿಗೆ ಬೆಳಗಲ್ ರಸ್ತೆಯ ಮಸೀದಿ ಹತ್ತಿರ ನಿನ್ನ ತಾಯಿ ಜಯಮ್ಮ ಮತ್ತು ತಂಗಿ ರಾಮಲಕ್ಷ್ಮಿ 1 ನೇ



ಆರೋಪಿಯೊಂದಿಗೆ ಬಿಳಿ ಕಾರಿನಲ್ಲಿ ಹೋಗಿದ್ದನ್ನು ನಾವು ನೋಡಿದ್ದೇವೆ ಎಂದು ಚಾಸಾ 1 ರವರಿಗೆ ಹೇಳಿದ್ದೆವು ಎಂದರೆ ಸರಿಯಲ್ಲ . ಆಗ ಚಾಸಾ 1 ರವರು 1 ನೇ ಆರೋಪಿ ಅವರನ್ನು ಅಪಹರಿಸಿಕೊಂಡು ಹೋಗಿರಬಹುದು ಎಂದು ಅನುಮಾನ ಪಟ್ಟಿದ್ದಳು ಎಂದರೆ ಸರಿಯಲ್ಲ . ಆ ಕುರಿತಂತೆ ಈಗ ಓದಿ ಹೇಳಿದ ನಿಪಿ-31 ರಂತೆ ನಾನು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ ಮತ್ತು ಅದೇ ದಿನ ಮದ್ಯಾಹ್ನ 2-15 ರಿಂದ 3-00 ಗಂಟೆವರೆಗೆ ಈಗ ಓದಿ ಹೇಳಿದ ನಿಪಿ-5 ರಂತೆ ಅಪಹರಣ ಸ್ಥಳದ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿ ಆ ಕಾಲಕ್ಕೆ ನಿಪಿ-6 ರಂತೆ ನಕಾಶೆ , ನಿಪಿ-7 ರಂತೆ ಪೋಟೋ ತೆಗೆದಿದ್ದರು ಎಂದರೆ ಸರಿಯಲ್ಲ ಮತ್ತು ದಿಃ 15-6-2021 ರಂದು ಆರೋಪಿರೆಲ್ಲರೂ ಸೇರಿ ಹಣಕಾಸಿನ ವಿಚಾರವಾಗಿ ಮೃತರೊಂದಿಗೆ ಜಗಳ ತೆಗೆದು ದಿಃ 21-3-2021 ರಂದು ಕಾರಿನಲ್ಲಿ ಅಪಹರಿಸಿಕೊಡಯಿ ಹೋಗಿ ರಾತ್ರಿ 90-30 ರ ಸುಮಾರಿಗೆ ಸಿರಿಗೇರಿ ರಸ್ತೆಯ ದಾಸಾಪುರ ಗ್ರಾಮದ ಹತ್ತಿರ ಎಲ್ ಎಲ್ ಸಿ ಕೆನಾಲ್ ಬಳಿ ಜಯಮ್ಮ ಮತ್ತು ರಾಮಲಕ್ಷ್ಮಿಗೆ ಕಬ್ಬಿಣದ ರಾಡಿನಿಂದ ಹೊಡೆದು ಕೊಲೆ ಮಾಡಿ ಬಂಗಾರದ ಆಭರಣ ತೆಗೆದುಕೊಂಡು ಕಾಲುವೆಗೆ ಹಾಕಿದ್ದರು ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದ ನಿಪಿ-32 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ ಮತ್ತು ಸದರಿ ಎಲ್ಲಾ ವಿಷಯವನ್ನು ಈಗ ಓದಿ ಹೇಳಿದ ನಿಪಿ-33 ರಂತೆ ಹೇಳಿಕೆ ನೀಡಿದ್ದೆ ಮಎತ್ತು ಆ ಸಮಯದಲ್ಲಿ ನಿಪಿ-30 ರಂತೆ ನನ್ನ ಹೇಳಿಕೆಯನ್ನು ವಿಡಿಯೋ ಮಾಡಲಾಗಿತ್ತು ಎಂದರೆ ಸರಿಯಲ್ಲ .

1 ನೇ ಆರೋಪಿ ಜಯಮ್ಮ ಮತ್ತು ರಾಮಲಕ್ಷ್ಮಿ ರವರನ್ನು ಅಪಹರಿಸಿ ಕರೆದುಕೊಂಡು ಹೋದ ವಿಷಯ ಗೊತ್ತಿದ್ದರೂ ಸಹ ಹಾಗೂ ನಿಪಿ-30 ರಿಂದ ನಿ ಪಿ-33 ರ ವಿಷಯ ಹಾಗೂ ನಿಪಿ-5 ರಿಂದ ನಿಪಿ-7 ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆ:- 816/2021

ಪ್ರಾಸಾಃ- 7 ಚಾಸಾಃ- 22

| | | |
|---|---|---|
| ಸಾಕ್ಷಿಯ ಹೆಸರು | : | ಕುಮಾರ್ |
| ತಂದೆ ಹೆಸರು | : | ಬಾಬು |
| ವಯಸ್ಸು | : | 35 ವರ್ಷ |
| ವೃತ್ತಿ | : | ಪೇಂಟಿಂಗ್ ಕೆಲಸ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.10.2023

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನನಗೆ ಚಾಸಾ 1 ಗೊತ್ತಿಲ್ಲ . ನನಗೆ ಆರೋಪಿತರು ಗೊತ್ತಿಲ್ಲ . ಸಾಕ್ಷಿಗೆ ವಿ ಸಿ ಮುಖಾಂತರ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ .

1 ನೇ ಆರೋಪಿ ಜಯಮ್ಮ ಮತ್ತು ರಾಮಲಕ್ಷ್ಮಿಯವರನ್ನು ಕಾರಿನಲ್ಲಿ ಕರೆದುಕೊಂಡು ಹೋಗಿದ್ದನ್ನು ಯಾವತ್ತೂ ನೋಡಿರುವುದಿಲ್ಲ ಮತ್ತು ಆ ಕುರಿತು ಚಾಸಾ 1 ರವರಿಗೆ ಯಾವುದೇ ವಿಷಯ ತಿಳಿಸಿಲ್ಲ . ಜಯಮ್ಮ ಮತ್ತು ರಾಮಲಕ್ಷ್ಮಿ ಕಾಣೆಯಾದ ವಿಚಾರ ಚಾಸಾ 1 ನಮಗೆ ಹೇಳಿಲ್ಲ ಮತ್ತು ಆ ಕುರಿತಂತೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ .

ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ಹಣಕಾಸಿನ ವಿಚಾರಕ್ಕಾಗಿ ಜಗಳ ಮಾಡಿಕೊಂಡು ಇದ್ದ ದ್ವೇಷದಿಂದ ಅಪಹರಿಸಿ ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ ಮತ್ತು

ಆ ಕುರಿತಂತೆ ನಾನು ಯಾವುದೇ ಹೇಳಿಕೆಗಳನ್ನು ನೀಡಿಲ್ಲ . ಪೊಲೀಸರು ನನ್ನ ಹೇಳಿಕೆಯ ಯಾವುದೇ ವಿಡಿಯೋ ಮಾಡಿಲ್ಲ . ಸಾಕ್ಷಿಗೆ ಆತನ ಹೇಳಿಕೆಯ ವಿಡಿಯೋ ಪ್ಲೇ ಮಾಡಿ



ತೋರಿಸಲಾಗಿ ಅದರಲ್ಲಿರುವ ಚಿತ್ರ ಮತ್ತು ಧ್ವನಿ ತನ್ನದಲ್ಲ ಎಂದು ನುಡಿಯುತ್ತಾರೆ . ಸದರಿ ಸಿಡಿಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ದಿನಾಂಕಃ 7-6-2021 ರಂದು , 15-6-2021 ಹಾಗೂ 10-8-2021 ರಂದು ನಾನು ಪೋಲೀಸರ ಮುಂದೆ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ನಾನು ಮತ್ತು ಚಾಸಾ 21 ಕೆಲಸದ ನಿಮಿತ್ತ ಬಳ್ಳಾರಿಯ ಬಂಡಿಹಟ್ಟಿ ಹತ್ತಿರ ಹೋಗಿದ್ದಾಗ ಜಯಮ್ಮ ರವರ ಮಗಳು ಶ್ರಾವಣಿ ನಮ್ಮನ್ನು ಮಾತನಾಡಿಸಿದ್ದಳು ಎಂದರೆ ಸರಿಯಲ್ಲ . ಆ ಸಮಯದಲ್ಲಿ ಚಾಸಾ 1 ತನ್ನ ತಾಯಿ ಜಯಮ್ಮ ಹಾಗೂ ತಂಗಿ ರಾಮಲಕ್ಷ್ಮಿ ರವರು ಸುಮಾರು ದಿನಗಳಿಂದ ಎಲ್ಲಿಗೋ ಹೋಗಿದ್ದಾರೆ ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ . ಆಗ ನಾವು ಮಾರ್ಚ್ 2021 ರ 3 ನೇ ಶನಿವಾರ ಮದ್ಯಾಹ್ನ 2-30 ರ ಸುಮಾರಿಗೆ ಬೆಳಗಲ್ ರಸ್ತೆಯ ಮಸೀದಿ ಹತ್ತಿರ ನಿನ್ನ ತಾಯಿ ಜಯಮ್ಮ ಮತ್ತು ತಂಗಿ ರಾಮಲಕ್ಷ್ಮಿ 1 ನೇ ಆರೋಪಿಯೊಂದಿಗೆ ಬಿಳಿ ಕಾರಿನಲ್ಲಿ ಹೋಗಿದ್ದನ್ನು ನಾವು ನೋಡಿದ್ದೇವೆ ಎಂದು ಚಾಸಾ 1 ರವರಿಗೆ ಹೇಳಿದ್ದೆವು ಎಂದರೆ ಸರಿಯಲ್ಲ . ಆಗ ಚಾಸಾ 1 ರವರು 1 ನೇ ಆರೋಪಿ ಅವರನ್ನು ಅಪಹರಿಸಿಕೊಂಡು ಹೋಗಿರಬಹುದು ಎಂದು ಅನುಮಾನ ಪಟ್ಟಿದ್ದಳು ಎಂದರೆ ಸರಿಯಲ್ಲ . ಆ ಕುರಿತಂತೆ ಈಗ ಓದಿ ಹೇಳಿದ ನಿಪಿ-34 ರಂತೆ ನಾನು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ ಮತ್ತು ದಿಃ 15-6-2021 ರಂದು ಆರೋಪಿತರೆಲ್ಲರೂ ಸೇರಿ ಹಣಕಾಸಿನ ವಿಚಾರವಾಗಿ ಮೃತರೊಂದಿಗೆ ಜಗಳ ತೆಗೆದು ದಿಃ 21-3-2021 ರಂದು ಕಾರಿನಲ್ಲಿ ಅಪಹರಿಸಿಕೊಂಡು ಹೋಗಿ ರಾತ್ರಿ 90-30 ರ ಸುಮಾರಿಗೆ ಸಿರಿಗೇರಿ ರಸ್ತೆಯ ದಾಸಾಪುರ

ಗ್ರಾಮದ ಹತ್ತಿರ ಎಲ್ ಎಲ್ ಸಿ ಕೆನಾಲ್ ಬಳಿ ಜಯಮ್ಮ ಮತ್ತು ರಾಮಲಕ್ಷ್ಮಿಗೆ ಕಬ್ಬಿಣದ ರಾಡಿನಿಂದ ಹೊಡೆದು ಕೊಲೆ ಮಾಡಿ ಬಂಗಾರದ ಆಭರಣ ತೆಗೆದುಕೊಂಡು ಕಾಲುವೆಗೆ ಹಾಕಿದ್ದರು ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದ ನಿಪಿ-35 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ ಮತ್ತು ಸದರಿ ಎಲ್ಲಾ ವಿಷಯವನ್ನು ಈಗ ಓದಿ ಹೇಳಿದ ನಿಪಿ-36 ರಂತೆ ಹೇಳಿಕೆ ನೀಡಿದ್ದೆ ಮತ್ತು ಆ ಸಮಯದಲ್ಲಿ ನಿಪಿ-23 ರಂತೆ ನನ್ನ ಹೇಳಿಕೆಯನ್ನು ವಿಡಿಯೋ ಮಾಡಲಾಗಿತ್ತು ಎಂದರೆ ಸರಿಯಲ್ಲ .

-3-

1 ನೇ ಆರೋಪಿ ಜಯಮ್ಮ ಮತ್ತು ರಾಮಲಕ್ಷ್ಮಿ ರವರನ್ನು ಅಪಹರಿಸಿ ಕರೆದುಕೊಂಡು ಹೋದ ವಿಷಯ ಗೊತ್ತಿದ್ದರೂ ಸಹ ಹಾಗೂ ನಿಪಿ-34 ರಿಂದ ನಿಪಿ-36 ರ ವಿಷಯ ಹಾಗೂ ನಿಪಿ-23 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.